# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ : 777
2. ವಿಧಾನ ಸಭೆಯ ಸದಸ್ಯರ ಹೆಸರು : ಶ್ರೀ. ಎನ್.ರವಿಕುಮಾರ್
3. ಉತ್ತರಿಸುವ ಸಚಿವರು : ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು
4. ಉತ್ತರಿಸಬೇಕಾದ ದಿನಾಂಕ : 15-12-2020

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ತೋಟಗಾರಿಕೆ ಇಲಾಖೆಯಲ್ಲಿ ಎಷ್ಟು ತೋಟಗಾರಿಕಾ ಬೆಳೆಗಳಿಗೆ ಮಂಡಳಿಗಳನ್ನು ರಚಿಸಲಾಗಿದೆ. ಅವು ಯಾವುವು; | ತೋಟಗಾರಿಕೆ ಇಲಾಖೆಯಲ್ಲಿ ನಾಲ್ಕು ತೋಟಗಾರಿಕಾ ಬೆಳೆಗಳಿಗೆ ಮಂಡಳಿಗಳನ್ನು ರಚಿಸಲಾಗಿದೆ. ಅವುಗಳು ಯಾವುವೆಂದರೆ<br>1. ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ ನಿಯಮಿತ<br>2. ಕರ್ನಾಟಕ ರಾಜ್ಯ ದ್ರಾಕ್ಷಾರಸ ಮಂಡಳಿ<br>3. ಕರ್ನಾಟಕ ರಾಜ್ಯ ಲಿಂಬೆ ಅಭಿವೃದ್ಧಿ ಮಂಡಳಿ<br>4. ಕರ್ನಾಟಕ ರಾಜ್ಯ ಸಾಂಬಾರು ಪದಾರ್ಥಗಳ ಅಭಿವೃದ್ಧಿ ಮಂಡಳಿ.<br>ಇವಲ್ಲದೆ ಎಲ್ಲಾ ರೀತಿಯ ತೋಟಗಾರಿಕೆ ಬೆಳೆಗಳ ವಹಿವಾಟು ನಡೆಸುವ ಜಿಲ್ಲಾಮಟ್ಟದ ಸಹಕಾರ ಸಂಘಗಳು ಹಾಗೂ ಬೆಂಗಳೂರು ಹಾಪ್ ಕಾಮ್ಸ್ ನ ಒಕ್ಕೂಟವನ್ನಾಗಿ ಕರ್ನಾಟಕ ರಾಜ್ಯ ಸಹಕಾರ ತೋಟಗಾರಿಕಾ ಮಹಾ ಮಂಡಳಿಯನ್ನಾಗಿ ಸ್ಥಾಪಿಸಲಾಗಿದೆ. |
| ಆ) | ಈ ತೋಟಗಾರಿಕಾ ಬೆಳೆಗಳಿಗೆ ರಚಿಸಲಾದ ಮಂಡಳಿಗಳಿಗೆ ಸರ್ಕಾರದಿಂದ ಕಳೆದ ಎರಡು ವರ್ಷಗಳಲ್ಲಿ ನೀಡಿದ ಅನುದಾನವೆಷ್ಟು (ಮಂಡಳಿವಾರು ವಿವರ ನೀಡುವುದು) | ಈ ತೋಟಗಾರಿಕಾ ಬೆಳೆಗಳಿಗೆ ರಚಿಸಲಾದ ಮಂಡಳಿಗಳಿಗೆ ಸರ್ಕಾರದಿಂದ ಕಳೆದ ಎರಡು ವರ್ಷಗಳಲ್ಲಿ ತಲಾ ರೂ.1000.00 ಲಕ್ಷಗಳ ಅನುದಾನವನ್ನು ನೀಡಿದ್ದು, ವಿವರಗಳು ಈ ಕೆಳಕಂಡಂತಿದೆ. |

| ಕ್ರ.ಸಂ | ಮಂಡಳಿ | ಅನುದಾನ (ರೂ,ಲಕ್ಷಗಳಲ್ಲಿ) | |
|---|---|---|---|
| | | 2018-19 | 2019-20 |
| 1 | ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ ನಿಯಮಿತ | 150.00 | 200.00 |
| 2 | ಕರ್ನಾಟಕ ರಾಜ್ಯ ದ್ರಾಕ್ಷಾರಸ ಮಂಡಳಿ | 350.00 | 300.00 |
| 3 | ಕರ್ನಾಟಕ ರಾಜ್ಯ ಲಿಂಬೆ ಅಭಿವೃದ್ಧಿ ಮಂಡಳಿ | 100.00 | 100.00 |
| 4 | ಕರ್ನಾಟಕ ರಾಜ್ಯ ಸಾಂಬಾರು ಪದಾರ್ಥಗಳ ಅಭಿವೃದ್ಧಿ ಮಂಡಳಿ | 200.00 | 200.00 |
| 5 | ಕರ್ನಾಟಕ ರಾಜ್ಯ ಸಹಕಾರಿ ತೋಟಗಾರಿಕಾ ಮಾರಾಟ ಮಹಾ ಮಂಡಳ (ನಿ) | 200.00 | 200.00 |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಇ) | ಮಾವು ಮತ್ತು ಹಲಸಿನ ಕೃಷಿಕರಿಗೆ ಯಾವ ಯಾವ ಸೌಲಭ್ಯಗಳನ್ನು ನೀಡಲಾಗುತ್ತದೆ. | ಮಾವು ಮತ್ತು ಹಲಸಿನ ಕೃಷಿಕರಿಗೆ ಈ ಕೆಳಕಂಡಂತೆ ಸೌಲಭ್ಯಗಳನ್ನು ನೀಡಲಾಗಿದೆ.<br>ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮಕ್ಕೆ ಸಂಬಂಧಿಸಿದಂತೆ ಮಾವು ಕೃಷಿಕರಿಗೆ ಈ ಕೆಳಕಂಡಂತೆ ಸೌಲಭ್ಯಗಳನ್ನು |

| | | |
|---|---|---|
| | | ನೀಡಲಾಗುತ್ತಿದೆ.<br>1. ಕೊಯ್ಲು ಪೂರ್ವ ಮಾವು ಸೆಪ್ಪೆಲ್, ಪೀಲರ್ ಕಮ್ ಸೀಲರ್, ಪೆರಮೋನ್ ಟ್ರಾಪ್ಸ್ ಮತ್ತು ಹಣ್ಣಿನ ಕವಚ ಪರಿಕರಗಳಿಗೆ ಸಹಾಯಧನ ನೀಡಲಾಗುತ್ತಿದೆ.<br>2. ಕೊಯ್ಲೋತ್ತರ ಪರಿಕರಗಳಾದ ಕಾರ್ಟೂನ್ ಬಾಕ್ಸ್, ಪ್ಲಾಸ್ಟಿಕ್ ಕ್ರೇಟ್ಸ್, ಕಟಾವು ಸಲಕರಣೆ ಮತ್ತು ಸಪರುಪಿಕೆ ಸಲಕರಣೆಗಳಿಗೆ ಸಹಾಯಧನ ನೀಡಲಾಗುತ್ತಿದೆ.<br>3. ವೈಜ್ಞಾನಿಕ ಮಾವು ಬೇಸಾಯ ಮತ್ತು ಸಸ್ಯ ಸಂರಕ್ಷಣಾ ಕ್ರಮಗಳ ಬಗ್ಗೆ ತಾಂತ್ರಿಕ ಮಾಹಿತಿ ಹಾಗೂ ಸಂಸ್ಕರಣೆ ಮತ್ತು ಮೌಲ್ಯವರ್ಧನೆ ಕುರಿತಂತೆ ವಸತಿ ಸಹಿತ/ವಸತಿ ರಹಿತ ತರಬೇತಿಗಳು, ಪ್ರಾತ್ಯಕ್ಷತೆ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ.<br>4. ನೇರ ಮಾರುಕಟ್ಟೆ ಉತ್ತೇಜನ ಕಾರ್ಯಕ್ರಮಗಳಾದ ರಾಜ್ಯ ಮತ್ತು ಜಿಲ್ಲಾ ಮಟ್ಟದ ಮಾವು ಮೇಳಗಳು, ಮಾಂಗೋ ಪಿಕ್ಕಿಂಗ್ ಟೂರಿಸಂ, ಬಿ2ಸಿ ಪೋರ್ಟಲ್ ಮುಖಾಂತರ ಆನ್‌ಲೈನ್ ಮಾರುಕಟ್ಟೆ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ.<br>5. ಮಾವು ತಾಕುಗಳಲ್ಲಿ ಉತ್ತಮ ಕೃಷಿ ಪದ್ಧತಿಗಳ ಅಳವಡಿಕೆಗೆ ಗ್ಲೋಬಲ್ ಗ್ಯಾಪ್ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.<br>6. ಮಾವು ಹೊಸತೋಟ ಸ್ಥಾಪನೆ, ಹಾಗೂ ಹಳೆ ತೋಟಗಳ ಪುನಶ್ಚೇತನ ಕಾರ್ಯಕ್ರಮಗಳಿಗೆ ಸಹಾಯಧನ ನೀಡಲಾಗುತ್ತಿದೆ<br>7. ಮಾವು ಸೇರಿದಂತೆ ಇತರೆ ತೋಟಗಾರಿಕೆ ಬೆಳೆಗಳಿಗೆ ತಗಲುವ ಕೀಟ ಮತ್ತು ರೋಗ ಸಸ್ಯ ಸಂರಕ್ಷಣಾ ಔಷಧಿಯನ್ನು ಬಳಸಲು ಸಹಾಯಧನ ನೀಡಲಾಗುತ್ತಿದೆ.<br>8. ಮಾವು ಮತ್ತು ಹಲಸು ಸೇರದಿಂತೆ ತೋಟಗಾರಿಕೆ ಬೆಳೆಗಳಿಗೆ ಹನಿ ನೀರಾವರಿ ಸೌಲಭ್ಯ ನೀಡಲಾಗುತ್ತಿದೆ.<br>9. ತೋಟಗಾರಿಕೆ ಇಲಾಖೆಯ ಕ್ಷೇತ್ರ ಮತ್ತು ನರ್ಸರಿಯಲ್ಲಿ ಉತ್ತಮ ಗುಣಮಟ್ಟದ ಮಾವು ಹಾಗೂ ಹಲಸಿನ ಸಸಿ ಕಸಿಯನ್ನು ಉತ್ಪಾದಿಸಿ ಯೋಗ್ಯ ದರದಲ್ಲಿ ಮಾರಾಟ ಮಾಡಲಾಗುತ್ತಿದೆ. |

ನಂ: HORTI/513/HGM/2020-admn-Horti-Sec

**(ನಾರಾಯಣಗೌಡ)**
**ಪೌರಾಡಳಿತ, ತೋಟಗಾರಿಕೆ**
**ಮತ್ತು ರೇಷ್ಮೆ ಸಚಿವರು**